ಚಾಮುಂಡೇಶ್ವರಿ ವಿದ್ಯುತ್‌ಸರಬರಾಜು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಅಧೀಕ್ಷಕ ಇಂಜಿನಿಯರ್ (ವಿ), ರವರಕಛೇರಿ,
ಕಾ ಮತ್ತು ಪಾ ವೃತ್ತ, ಚಾ.ನಗರ – ಕೊಡಗು,
ಶ್ರೀ ಹರ್ಷರಸ್ತೆ, ಮೈಸೂರು.
ದೂರವಾಣಿ: 0821–2420850

CHAMUNDESHWARI ELECTRICITY SUPPLY CORPORATION LIMITED
*(A Government of Karnataka Undertaking)*
O&M Circle, Chamarajanagar-Kodagu,
MPL Compound, Sri Harsha Road,
Mysuru-570001.
Web site: www.cescmysore.org
E-mail ID: seechnkodagu@cescmysore.org

**Company Identity Number (CIN):U40109KA2004SGC035177**

ಸಂಖ್ಯೆ: ಅಇಂ(ವಿ)/ಕಾನಿಇಂ/ಸಕಾನಿಇಂ/ಕ–127/2023–24/ CYS- 65 ದಿನಾಂಕ: 31 JUL 2023

## –: ಸಭೆಯ ನಡಾವಳಿಗಳು :–

**ದಿನಾಂಕ 17.06.2023 ರಂದು ಮಧ್ಯಾಹ್ನ ವಿರಾಜಪೇಟೆ ಉಪವಿಭಾಗ ವ್ಯಾಪ್ತಿಯಲ್ಲಿ ತಾಂತ್ರೀಕ ನಿರ್ದೇಶಕ ರವರ ಅಧ್ಯಕ್ಷತೆಯಲ್ಲಿ ನಡೆದ ಜನ ಸಂಪರ್ಕ ನಡಾವಳಿಗಳು.**

ಸಭೆಯಲ್ಲಿ ಹಾಜರಿದ್ದವರು:–

1 ಶ್ರೀ. ಸೋಮರಾಜು.ಎಲ್ : ಅಧೀಕ್ಷಕ ಇಂಜಿನಿಯರ್ (ವಿ),ಮೈಸೂರು ವೃತ್ತ.
2 ಶ್ರೀ. ಕೆ.ವಿ.ಸೋಮೇಶ್ : ಸಹಾಯಕ ಇಂಜಿನಿಯರ್(ತಾ),(ಪ್ರಭಾರ) ವಿರಾಜಪೇಟೆ
3. ಶ್ರೀ. ಶಿವನಗೌಡ ಅ ಪಾಟೀಲ್ : ಸಹಾಯಕ ಇಂಜಿನಿಯರ್(ವಿ), ವಿರಾಜಪೇಟೆ
4 ಶ್ರೀ.ಜಗದೀಶ್ : ಪ್ರಭಾರ ಹಿರಿಯ ಸಹಾಯಕರು, ಕಂದಾಯ ಶಾಖೆ, ಸೆಸ್ಕ್, ವಿರಾಜಪೇಟೆ.

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಸಭೆಯಲ್ಲಿ ಹಾಜರಿದ್ದ ಎಲ್ಲರನ್ನೂ ಸ್ವಾಗತಿಸಿ ಕಾರ್ಯ ನಿರ್ವಾಹಕ ಇಂಜಿನಿಯರ್ (ವಿ) ರವರಾದ ಶ್ರೀ ಉಮೇಶ್‌ಚಂದ್ರ ತಾಂತ್ರಿಕ ನಿರ್ದೇಶಕರವರನ್ನು ಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಳ್ಳುವಂತೆ ವಿನಂತಿಸಿಕೊಂಡರು.

ಸಭೆಯಲ್ಲಿ ಮಾತನಾಡಿದ ತಾಂತೀಕ ನಿರ್ದೇಶಕರು ಸರ್ಕಾರದ ಮಹತ್ವದ ಯೋಜನೆಯಾದ ಗೃಹಜ್ಯೋತಿ ಯೋಜನೆಯ ಮಾಹಿತಿಯನ್ನು ತಿಳಿಸಿದರು. ಹಾಗೆಯೇ ವಿದ್ಯುತ್ ಬಿಲ್ಲಿನಲ್ಲಿ ಈ ಮಾಸಿಕ ಅವಧಿಯಲ್ಲಿ ಹೆಚ್ಚುವರಿ ಬಿಲ್ಲು ನೀಡಿರುವ ಬಗ್ಗೆ ವಿವರವಾದ ಮಾಹಿತಿಯನ್ನು ಸಭೆಯಲ್ಲಿ ತಿಳಿಸಿದರು.

ಸಭೆಯಲ್ಲಿ ಹಾಜರಿದ್ದ ಗ್ರಾಹಕರ ಕುಂದುಕೊರತೆಗಳನ್ನು ಆಲಿಸಿ ಈ ಕೆಳಕಂಡಂತೆ ಸಲಹೆ ಸೂಚನೆಗಳನ್ನು ನೀಡಿದರು.

| ಕ್ರ. ಸಂ | ಸಲಹೆ/ದೂರುಗಳನ್ನು ನೀಡಿದ ಸದಸ್ಯರ ಹೆಸರು ಮತ್ತು ವಿಳಾಸ | ಸಲಹೆ/ದೂರುಗಳ ವಿವರ | ಅನುಸರಣೆ |
|---|---|---|---|
| 1 | ಶ್ರೀ ನಂಜಪ್ಪ, ಬೇಟೋಳಿ ಗ್ರಾಮ<br>ದೂ: 9449790189 | • ಸದರಿಯವರು ಪಾಲಂಗಾಲ 11 ಕೆ.ವಿ.ಫೀಡರಗೆ ಬೇತ್ರಿ ಫೀಡರನ್ನು ಕ್ಲಬ್ ಮಾಡಿರುವುದರಿಂದ ವಿದ್ಯುತ್ ವ್ಯತ್ಯಯ ಉಂಟಾಗುತ್ತಿದ್ದು ಸಮಸ್ಯೆಯನ್ನು ಇತ್ಯರ್ಥಪಡಿಸ ಬೇಕಾಗಿ ಕೋರಿಕೊಂಡರು.<br>• ಸದರಿರವರು ಮಳೆಗಾಲದ ಸಮಯದಲ್ಲಿ ಬೇಟೋಳಿಯಿಂದ ಪಾಲಂಗಾಲ ಸಾಗುವ 11 ಕೆ.ವಿ. ಮಾರ್ಗವು ನದಿಯ ಹಿನ್ನೀರಿನಿಂದ ವರ್ಷಂಪ್ರತಿ ಮುಳುಗಡೆಯಾಗುತ್ತಿರುವುದರಿಂದ ಬದಲಿ ಮಾರ್ಗವಾಗಿ ಬೇಟೋಳಿ ಗ್ರಾಮಕ್ಕೆ 11 ಕೆ.ವಿ.ಮಾರ್ಗವನ್ನು ಅಳವಡಿಸಬೇಕೆಂದು ಕೋರಿದರು. | • ಸದರಿ 11 ಕೆ.ವಿ. ಭೇತ್ರಿ ಫೀಡರ ಎ.ಬಿ.ಕೇಬಲನ ದೋಷವನ್ನು ಆದಷ್ಟು ಶೀಘ್ರದಲ್ಲಿ ಸರಿಪಡಿಸಿ 11 ಕೆ.ವಿ. ಪಾಲಂಗಾಲ ಮತ್ತು ಬೇತ್ರಿ ಫೀಡರನ್ನು ಪ್ರತ್ಯೇಕಗೊಳಿಸಿ ಚಾಲನೆ ಮಾಡಲು ವೀರಾಜಪೇಟೆ ಶಾಖಾಧಿಕಾರಿಗಳಿಗೆ ಸೂಚಿಸಿದರು.<br>• ಉತ್ತರಿಸಿದ ಸಹಾಯಕ ನಿರ್ವಹಾಕ ಇಂಜಿನೀಯರ್ ಈಗಾಗಲೇ ಅಂದಾಜು ಪಟ್ಟಿಯನ್ನು ವಿಭಾಗೀಯ ಕಛೇರಿಗೆ ಕಳುಹಿಸಲಾಗಿದೆ ಎಂದು ತಿಳಿಸಿದರು |
| 2 | ಶ್ರೀ. ಮಿಥುನ ತಿಮ್ಮಯ್ಯ ಚೆಂಬೆಬೆಳ್ಳೂರು ಗ್ರಾಮ | * ತಮ್ಮ ಗ್ರಾಮವು ಕುಗ್ರಾಮವಾಗಿದ್ದು, ಸದರಿ ವ್ಯಾಪ್ತಿಯಲ್ಲಿ ಆಗಾಗ ವಿದ್ಯುತ್ ವ್ಯತ್ಯಯ ಉಂಟಾಗುತ್ತಿದ್ದು ಈವರಗೆ ಹಲವಾರು ಬಾರಿ ಅಮ್ಮತ್ತಿ ಶಾಖೆಯ ಕಿರಿಯ ಇಂಜಿನೀಯರ್‌ರವರಿಗೂ, ಉಪ–ವಿಭಾಗಾಧಿಕಾರಿಗಳಿಗೂ ಗಮನಕ್ಕೆ ತಂದರೂ ಯಾವುದೇ ಪ್ರಯೋಜನವಾಗಿಲ್ಲವೆಂದು ತಿಳಿಸಿದರು. ಮಾರ್ಗದ ಮೇಲೆ ಬೀಳುವ ಮರಗಳನ್ನು ತೆರವುಗೊಳಿಸಲು ಅರಣ್ಯ | * ಈ ಬಗ್ಗೆ ತಾಂತ್ರಿಕ ನಿರ್ದೇಶಕರು ಮಾತನಾಡಿ ಮಾಗಕ್ಕೆ ಹೊಂದಿಕೊಂಡಿರುವ ಮರಗಳ ರೆಂಬೆಗಳನ್ನು ತೆರೆವುಗೊಳಿಸುವುದಾಗಿ ತಿಳಿಸಿದರು.<br>* ವಿದ್ಯುತ್ ಅಡಚಣೆಗೆ ಸಂಬಂದಪಟ್ಟ ಕ್ರಮಗಳನ್ನು ತೆಗೆದು ಕೊಳ್ಳುವುದಾಗಿ ತಿಳಿಸಿದರು. |

| | | | |
|---|---|---|---|
| | | ಇಲಾಖೆಯೊಂದಿಗೆ ತಿಳಿಸಿ ಮುಂಜಾಗ್ರತ ಕ್ರಮವನ್ನು ತೆಗೆದು ಕೊಳ್ಳಬೇಕೆಂದರು.<br>• ಸೋಲಾರ್ ಅಳವಡಿಕೆಯ ಬಗ್ಗೆ ಮಾಹಿತಿಯನ್ನು ಕೋರಿದರು. | * ಸೋಲಾರ್ ಅಳವಡಿಕೆಯ ಬಗ್ಗೆ ತಂತ್ರಾಂಶದಲ್ಲಿ ಅರ್ಜಿ ಸಲ್ಲಿಸುವಂತೆಯೂ ಹಾಗು ಅದರ ಬಗ್ಗೆ ಮಾಹಿತಿಯನ್ನು ನೀಡಿದರು. |
| 3 | ಶ್ರೀ ಶಶಿಕುಮಾರ್ ಕಣ್ಣಂಗಾಲ ಗ್ರಾಮ | • ಶ್ರೀಯುತರು ಮಾತನಾಡಿ ಕಂಡಂಗಾಲ ಗ್ರಾಮದಲ್ಲಿ ಸುಮಾರು 3 ವರುಷಗಳ ಹಿಂದೆ ನನ್ನ ಮಗ ವಿದ್ಯುತ್ ಅಪಘಾತದಿಂದ ಮೃತ ಪಟ್ಟಿದ್ದು ಇದುವರೆಗೂ ನಿಗಮದಿಂದ ಪರಿಹಾರವನ್ನು ನೀಡಿಲ್ಲ ಎಂದು ಅದರಿಂದ ಪರಿಹಾರವನ್ನು ಆದಷ್ಟು ಬೇಗ ನೀಡಬೇಕೆಂದು ಕೋರಿದರು. | * ಉತ್ತರಿಸಿದ ತಾಂತ್ರೀಕ ನಿರ್ದೇಶಕರು ಕಾರ್ಯ ನಿರ್ವಾಹಕ ಇಂಜನೀಯರಿಗೆ ಕೂಡಲೇ ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಿದರು. ತಕ್ಷಣ ಸ್ಪಂದಿಸಿದ ಕಾರ್ಯನಿರ್ವಹಾಕ ಇಂಜನೀಯರವರು ದೂರವಾಣಿ ಮೂಲಕ ಲೆಕ್ಕಾಧಿಕಾರಿಗಳಿಗೆ ಕೂಡಲೇ ಅಗತ್ಯ ಕ್ರಮಗಳನ್ನು ನಿಗಮದ ನಿಯಮದಂತೆ ಪರಿಹಾರವನ್ನು ನೀಡಲು ಸೂಚಿಸಿದರು. |

ಸಹಾಯಕ ಕಾರ್ಯನಿರ್ವಾಹಕ ಇಂಜನಿಯರ್(ವಿ) ಆದ ಶ್ರೀ.ಸುರೇಶ್‌ರವರು ಸಭೆಯಲ್ಲಿ ಹಾಜರಿದ್ದ ಎಲ್ಲರಿಗೂ ವಂದನೆಗಳನ್ನು ಸಲ್ಲಿಸುತ್ತ ನಿಗಮದ ವತಿಯಿಂದ ಗ್ರಾಹಕರಿಗೆ ಉತ್ತಮ ಸೇವೆ ಸಲ್ಲಿಸಲು ಸರ್ವ ಪ್ರಯತ್ನ ಮಾಡಲಾಗುವುದೆಂದು ತಿಳಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ತಮ್ಮ ವಿಶ್ವಾಸಿ.

ಅಧೀಕ್ಷಕ ಇಂಜನಿಯರ್(ವಿ)
ಚಾ.ವಿ.ಸ.ನಿ.ನಿ., ಕಾ ಮತ್ತು ಪಾ ವೃತ್ತ,
ಚಾಮರಾಜನಗರ ಮತ್ತು ಕೊಡಗು.

ಪ್ರತಿಯನ್ನು:-

1. ಮುಖ್ಯ ಇಂಜನಿಯರ್(ವಿ), ಚಾವಿಸನಿನಿ., ವಲಯ ಕಛೇರಿ, ಮೈಸೂರು ರವರಿಗೆ ಸಲ್ಲಿಸಲಾಗಿದೆ.
2. ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ), ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
3. ವ್ಯವಸ್ಥಾಪಕ ನಿರ್ದೇಶಕರ ಕಾರ್ಯನಿವಾಹಕ ಸಹಾಯಕರು, ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
4. ಕಾರ್ಯನಿರ್ವಾಹಕ ಇಂಜನಿಯರ್ (ವಿ), ಚಾವಿಸನಿನಿ, ಕಾ ಮತ್ತು ಪಾ ವಿಭಾಗ, ಮಡಿಕೇರಿ ರವರಿಗೆ ಮಾಹಿತಿಗಾಗಿ.
5. ನಿರ್ದೇಶಕರು(ತಾಂತ್ರಿಕ) ರವರ ತಾಂತ್ರಿಕ ಸಹಾಯಕರು, ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
6. ಸಹಾಯಕ ಕಾರ್ಯನಿರ್ವಾಹಕ ಇಂಜನಿಯರ್ (ವಿ), ಚಾ.ವಿ.ಸ.ನಿ.ನಿ., ವಿರಾಜಪೇಟೆ ಉಪವಿಭಾಗ ರವರ ಮಾಹಿತಿಗಾಗಿ.
7. ಹಿಆಸ/ಪ್ರಕ/ಕಡತ.